ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 29-33
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅನುಭವ ಮಂಟಪ: ಅಕ್ಕಮಹಾದೇವಿಯ ಸಂಘರ್ಷ

**ಅರುಣ ಸಿ. ಕೆ[1] ಮತ್ತು ಪ್ರೊ. ಡಿ. ವಿಜಯಲಕ್ಷ್ಮಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಉಡುತಡಿಯಿಂದ ಕಲ್ಯಾಣದವರೆಗಿನ ಅಕ್ಕನ ಪಯಣವನ್ನು 'ಆಧ್ಯಾತ್ಮಯಾನ'ವೆಂದು ಕರೆದರೆ ತಪ್ಪಾಗಲಾರದು. ದಿಗಂಬರಳಾದ ಅಕ್ಕ ಕಲ್ಯಾಣದವರೆಗೂ ನಡೆಯುವಾಗ ಎದುರಿಸಿದ ಲೋಕಪವಾದಗಳು ಆಕೆಯ ನಡಿಗೆಯನ್ನು ಕುಂಟಿಸದೆ ಬಿರುಸು ತಂದಿವೆ. ವಚನಕಾರರ ಧ್ಯೇಯಗಳಿಗೂ ಅಕ್ಕನ ಚೆನ್ನಮಲ್ಲಿಕಾರ್ಜುನನ ಮೇಲಿನ ತುಡಿತಕ್ಕೂ ಅನುಭಾವ ಸಂಬಂಧವಿರುವುದರಿಂದ ಅಕ್ಕನ ಕಲ್ಯಾಣದ ನಡಿಗೆಗೆ ಅರ್ಥ ದೊರಕಿದೆ. ಕಲ್ಯಾಣಾಭಿಮುಖವಾಗಿ ಹೊರಟ ಅಕ್ಕನಿಗೆ ಮನುಷ್ಯ ಸಹಜವಾದ ಹಸಿವು, ತೃಷೆಗಳು ಕೂಡ ಕಾಡಿವೆ ಎಂಬುದನ್ನು ಅಕ್ಕನ ವಚನಗಳಿಂದಲೇ ಅರಿಯಬಹುದು. ಅಭಿವ್ಯಕ್ತಿ ಸ್ವಾತಂತ್ರ್ಯ, ವಿಚಾರ ಮತ್ತು ವೈಚಾರಿಕ ಸ್ವಾತಂತ್ರ್ಯಕ್ಕೆ ಅನುವು ಮಾಡಿಕೊಟ್ಟ ಆಧ್ಯಾತ್ಮಿಕ ಸಂಸ್ಥೆಯಾಗಿ 'ಅನುಭವ ಮಂಟಪ'ವು ಕೀರ್ತಿದಾಯಕವಾಗಿದೆ.*

***Keywords:*** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಬಸವಣ್ಣ, ಅನುಭವ ಮಂಟಪ, ಅಕ್ಕಮಹಾದೇವಿ.*

**ಪೀಠಿಕೆ**

ಜಗತ್ತಿನ ಮೊದಲ ಸ್ವತಂತ್ರವಾದ ಲೋಕಸಭೆ ಎನಿಸಿಕೊಂಡಿರುವ 'ಅನುಭವ ಮಂಟಪ'ವು ಅಕ್ಕನ ಚಿಂತನೆಗಳಿಗೆ ಸಮಾನವಾದ ವೇದಿಕೆಯಾದ್ದರಿಂದ ತನ್ನ ನಿಲುವುಗಳನ್ನು ಅಭಿವ್ಯಕ್ತಿಸಿ ತನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳಲು ಸಹಾಯಕಾರಿಯಾಯಿತು. ಅನುಭವ ಮಂಟಪಕ್ಕೆ ಪ್ರವೇಶಿಸುವಾಗ ಶರಣರು ಕೇಳಿದ ಪ್ರಶ್ನೆಗಳಿಗೆ ಆಕೆ ಕೊಡುವ ಉತ್ತರ ರೂಪದ ವಚನವು ಶರಣರ ಶ್ರೇಷ್ಠತೆಯನ್ನು ತೆರೆದು ತೋರುತ್ತದೆ.

***"ಆಡುವುದು, ಪಾಡುವುದು ; ಕೇಳುವುದು, ಹೇಳುವುದು !***
***ನಡೆವುದು, ನುಡಿಯುವುದು, ಸರಸ ಸಮ್ಮೇಳನದಲ್ಲಿಪ್ಪುದಯ್ಯ ಶರಣರೊಡನೆ !***
***ಚೆನ್ನಮಲ್ಲಿಕಾರ್ಜುನಯ್ಯ***
***ನೀ ಕೊಟ್ಟ ಆಯುಷ್ಯ ಉಳ್ಳನ್ನಕ್ಕರ ಲಿಂಗಸುಖಿಗಳ ಸಂಗದಲಿ ದಿನಂಗಳ ಕಳೆವುದು !"*** [1]

ಶರಣರೊಟ್ಟಿಗೆ ಇರಲು ಬಯಸುವ ಅಕ್ಕನ ಅಭಿಲಾಷೆಯಲ್ಲಿ ಚೆನ್ನಮಲ್ಲಿಕಾರ್ಜುನನನ್ನು ಕಾಣುವ ಇಂಗಿತವಿದೆ. ಲಿಂಗಸುಖಿಗಳ ಸಂಗದಲ್ಲಿದ್ದು ಆಧ್ಯಾತ್ಮವೆಂಬ ಸರಸ ಸಮ್ಮೇಳನದಲ್ಲಿ ಭಾಗಿಯಾಗಬೇಕೆನ್ನುವ ಅಕ್ಕನಿಗೆ ಅನುಭವ ಮಂಟಪದ ಪ್ರತೀತಿಯ ಬಗೆಗೆ ಅರಿವಿತ್ತು. ಆಧ್ಯಾತ್ಮವನ್ನು ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಮೀಸಲಿರಿಸಿದ್ದ ಅನುಭಾವಿಗಳು ಒಂದೆಡೆ ಸೇರುವ ಸಂಗತಿಯು ಅಕ್ಕನು ಶರಣತ್ವವನ್ನು ಹೊಂದಲು

1. ಬಸವರಾಜು. ಎಲ್. (ಸಂ.) *ಅಕ್ಕನ ವಚನಗಳು.* ಪುಟ–92

***Please cite this article as:*** ಅರುಣ ಸಿ. ಕೆ. ಮತ್ತು ಡಿ. ವಿಜಯಲಕ್ಷ್ಮಿ. (2026). ಅನುಭವ ಮಂಟಪ: ಅಕ್ಕಮಹಾದೇವಿಯ ಸಂಘರ್ಷ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 29–33

ಮುಖ್ಯವಾಹಿನಿಯಾಗಿ ಗೋಚರಿಸಿದೆ. "ಅನುಭವ ಮಂಟಪದಲ್ಲಿ ನಡೆಯುವ ಚರ್ಚೆಯು ಆತ್ಮನಾತ್ಮ ಸಂಬಂಧವಾದ ಧಾರ್ಮಿಕ ವಿಷಯವಾಗಿರುತ್ತಿತ್ತು. ಅದು ಕೂಡ ಶುಷ್ಕ ತಾರ್ಕಿಕವಾಗಿರದೆ ಅನುಭವಪೂರ್ಣವಾದುದಾಗಿರುತ್ತಿತ್ತು. ಅಂತೆಯೇ ಈ ಚರ್ಚೆಗೆ ಅನುಭಾವಗೊಷ್ಠಿ ಎಂದು ಕರೆಯಲಾಗುತ್ತಿತ್ತು. ಎಲ್ಲಿ ಪಾಂಡಿತ್ಯ ಪ್ರದರ್ಶಿಸಬೇಕು ಗೆಲುವನ್ನು ಸಾಧಿಸಬೇಕು ಬಿರುದು ಬಾವಲಿಗಳನ್ನು ಸಂಪಾದಿಸಬೇಕು ಎನ್ನುವ ಯಾವ ಹವ್ಯಾಸವು ಇರಲಿಲ್ಲ."[2] ಹಾಗಾಗಿಯೇ ಅಕ್ಕಮಹಾದೇವಿಯು ತನ್ನ ಆಧ್ಯಾತ್ಮಿಕ ನಿಲುವನ್ನು ಸಾಕಾರಗೊಳಿಸಿಕೊಳ್ಳಲು ಶರಣರ ಸಂಗವನ್ನು ಬಯಸಿದ್ದಾಳೆ. ಅಕ್ಕ ಉಡುತಡಿಯಿಂದ ಕಲ್ಯಾಣದವರೆಗೆ ಪಯಣಿಸುವಾಗ ಊರೊಳಗಿನ ಭಿಕ್ಷಾನ್ನಗಳಿಂದ ಹಸಿವು ನೀಗಿಸಿಕೊಂಡಿದ್ದಾಳೆ, ಕೆರೆ–ಬಾವಿ ಹಳ್ಳಗಳಿಂದ ತೃಷೆಯನ್ನು ನಿವಾರಿಸಿಕೊಂಡಿದ್ದಾಳೆ, ಹಾಳು ದೇಗುಲಗಳಲ್ಲಿ ಶಯನಗೊಂಡು ಚೆನ್ನಮಲ್ಲಿಕಾರ್ಜುನನ ಸಂಗಾತಕ್ಕಾಗಿ ಕಲ್ಯಾಣದವರೆಗೆ ನಡೆದಿದ್ದಾಳೆ. ನಿಸರ್ಗವನ್ನು ಕಣ್ತುಂಬಿ ಕೊಳ್ಳುತ್ತಾ ಸಕಲದರಲ್ಲೂ ಚೆನ್ನನನ್ನು ಅರಸುತ್ತ ದಾರಿಸವೆಸಿರುವ ಅಕ್ಕ, ನಿಂದಕರಿಗೂ ಪ್ರತ್ಯುತ್ತರ ನೀಡುತ್ತಲೇ ಕಲ್ಯಾಣಕ್ಕೆ ಆಗಮಿಸಿದ್ದಾಳೆ. ಬಸವಾದಿ ಶರಣರ ಮಹಿಮೆಯನ್ನು ಈ ಮೊದಲೇ ಅರಿತಿದ್ದ ಕಾರಣದಿಂದಾಗಿಯೇ ಅಕ್ಕ ಕಲ್ಯಾಣಕ್ಕೆ ನಡೆದು ಬರುವ ಸಂಗತಿ ಪೂರ್ವನಿರ್ಧಾರಿತವಾಗಿದೆ. ಕಲ್ಯಾಣದಲ್ಲಿ ಶರಣರು ಸಾಧಿಸಿದ ಸಾಮಾಜಿಕ ನಿಷ್ಠೆಯ ಆಧ್ಯಾತ್ಮ ಮತ್ತು ನೈತಿಕಬದ್ಧತೆಯನ್ನು ಕುರಿತು ತನ್ನ ವಚನದಲ್ಲಿ ಅಕ್ಕ ಕೊಂಡಾಡಿದ್ದಾಳೆ.

***"ಆಶೆ ಆಮಿಷವನಳಿದವಂಗಲ್ಲದೆ***
***ಕಲ್ಯಾಣದತ್ತಲಡಿಯಿಡಬಾರದು !***
***ಒಳಗು–ಹೊರಗೂ ಶುದ್ಧವಾದಂಗಲ್ಲದೆ***
***ಕಲ್ಯಾಣವ ಹೊಗಬಾರದು !"*** [3]

ಆಸೆ–ಆಮಿಷವನ್ನು ಅಳಿದವರು ಹಾಗೂ ಒಳ–ಹೊರಗನ್ನು ಶುದ್ಧವಾಗಿರಿಸಿಕೊಂಡವರಿಗೆ ಮಾತ್ರ ಕಲ್ಯಾಣದಲ್ಲಿ ಮುಕ್ತ ಪ್ರವೇಶವೆಂಬುದನ್ನು ಅಕ್ಕ ಅರಿತಿದ್ದಳು. ಈ ಮಾತಿಗೆ ಅಕ್ಕ ಕೂಡ ಬದ್ಧಳಾಗಿದ್ದಳು. ಅಕ್ಕನ ನುಡಿ–ನಡೆಯಿಂದಾದ ಪ್ರತಿಜ್ಞೆಯಾಗಿತ್ತು. ಅಲ್ಲಮ ಮತ್ತು ಅಕ್ಕನ ನಡುವೆ ನಡೆದಿರುವ ಸಂವಾದದಿಂದ ಅನುಭವ ಮಂಟಪದಲ್ಲಿ ಅಕ್ಕನು ಎದುರಿಸಿದ ಸಂಘರ್ಷ ಮತ್ತು ಸ್ಥಾಪಿಸಿಕೊಂಡ ಅಸ್ತಿತ್ವವನ್ನು ಮನಗಾಣಬಹುದು. ಅಕ್ಕನ ವಚನಗಳಲ್ಲಿ ಆಕೆ ಪ್ರಭುದೇವರು ಮತ್ತು ಕಿನ್ನರಿ ಬೊಮ್ಮಯ್ಯನನ್ನು ಎದುರಿಸಿದ ಪ್ರಸಂಗಕ್ಕೆ ಸಮರ್ಥನೆಗಳು ದೊರಕುತ್ತವೆ. 'ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯವಾಗಿ ಶರಣಸತಿ ಲಿಂಗಪತಿಯಾಯಿತೆನ್ನುವ' ಅಕ್ಕನ ಆಧ್ಯಾತ್ಮದ ಸಿದ್ದಿಯ ಕಂಡು ಅನುಭವ ಮಂಟಪದ ಶರಣರು ತಲೆದೂಗುತ್ತಾರೆ. ಹರಿಹರನ ಹೊರತಾಗಿ ಉಳಿದೆಲ್ಲ ಶೂನ್ಯ ಸಂಪಾದಕರ ಬರಹಗಳಲ್ಲಿ ಈ ಸಂಗತಿಯು ಸ್ತ್ರೀ ಅಸ್ತಿತ್ವದ ಪ್ರಶ್ನೆಯಾಗಿ ಚರ್ಚಿಸಲ್ಪಟ್ಟಿದೆ. ಹೆಣ್ಣೆಂಬ ಎಂಬ ಕಾರಣಕ್ಕೆ ಪರೀಕ್ಷೆಗೆ ಒಳಗಾಗುವ ಅಕ್ಕನಿಗೆ ಅನುಭವ ಮಂಟಪದ ಪ್ರವೇಶವು ಚಾರಿತ್ರಿಕವಾಗಿ ಬಹುಮುಖ್ಯ ಸಂಗತಿ ಎನಿಸಿದೆ. 'ಮನದ ಮುಂದಣ ಆಸೆಯೇ ಮಾಯೆ' ಎನ್ನುವ ಅಲ್ಲಮನು ಕೂಡ ಅಕ್ಕನ ಚಾರಿತ್ರ್ಯ ಶುದ್ಧಿಯ ಬಗೆಗೆ ಎತ್ತುವ ಪ್ರಶ್ನೆಗಳು ಹೆಣ್ಣಿನ ಶರಣತ್ವವನ್ನು ಮಾತ್ರ ನಿಕಷನಕ್ಕೂ ಒಡ್ಡುವ ಪುರುಷಶಾಹಿತ್ವವನ್ನು ಬಯಲುಗೊಳಿಸಿದೆ. ಅಲ್ಲಮಪ್ರಭುವಿನ ಆದೇಶದ ಮೇರೆಗೆ ಕಿನ್ನರಿ ಬೊಮ್ಮಯ್ಯನು ಅಕ್ಕನನ್ನು ಪರೀಕ್ಷೆಗೆ ಒಳಪಡಿಸುವಾಗ ಹೀಗೆ ಕೇಳುತ್ತಾನೆ.

***"ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆಯಿರಲು***
***ಏತರಮನೆ? ಇದೇತರ ನಿರ್ವಾಣ?***

[2] ಸಂಗಮೇಶ ಎಂ ಬಿರಾದರ. *ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ.* ಪುಟ–4

[3]. ಬಸವರಾಜು. ಎಲ್. (ಸಂ.) *ಅಕ್ಕನ ವಚನಗಳು.* ಪುಟ–88

***ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬನಲ್ಲದೆ***
***ಸಜ್ಜನೆಯೆಂದು ಕೈವಿಡಿದನಲ್ಲ ಕೇಳಾ ಮರುಳೆ!"*** [4]

ದಿಗಂಬರಳಾಗಿ ಹೆಣ್ಣಿನ ಕಟ್ಟುಕಟ್ಟಳೆಗಳನ್ನು ಮುರಿದು ಸಂಸಾರವನ್ನು ನಿಸ್ಸಾರವೆಂದು ಬಗೆದ ಅಕ್ಕನನ್ನು ಸಂಸಾರಿಯೆಂದು ಭಾವಿಸಿ, ಪರೀಕ್ಷೆಗೊಳಪಡಿಸುವ ಕಿನ್ನರಿ ಬೊಮ್ಮಯ್ಯನಿಗೆ ತನ್ನ 'ಶಿವಾನುಭಾವ'ದ ಮೂಲಕ ಅಕ್ಕ ಉತ್ತರಿಸುತ್ತಾಳೆ. ಗಂಡನ ಕುರುಹುವಿನ ಮೂಲಕ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವಂತೆ ಒತ್ತಾಯಿಸುವ ಶರಣರಿಗೆ ಅಕ್ಕ 'ಶರಣತಿ–ಲಿಂಗಪತಿ' ಎನ್ನುವ ತತ್ವವನ್ನು ನಿರೂಪಿಸುತ್ತಾಳೆ. ವಿವಾಹಿತ ಶರಣರಿಗಿಲ್ಲದ ನಿರ್ಬಂಧ ವಿವಾಹಿತ ಶರಣೆಗೆ ಮಾತ್ರ ಎದುರಾದದ್ದು ವಿಪರ್ಯಾಸ. ಅಕ್ಕನ ನಿರ್ಲಿಪ್ತತೆಯನ್ನು, ನಿಸ್ಸಂಗಿತನವನ್ನು ಹಾಗೂ ನಿರ್ಮೋಹಿ ಗುಣವನ್ನು ಗುರುತಿಸುವ ಸಲುವಾಗಿಯೇ ಅಲ್ಲಮನಾದಿಯಾಗಿ ಶರಣರೆಲ್ಲರೂ ಅಕ್ಕನ ಪರೀಕ್ಷೆಗೆ ಮುಂದಾಗಿರಬಹುದು.

"ಅನುಭವ ಮಂಟಪದಲ್ಲಿದ್ದ ಹಿರಿಯ ಶರಣರಾದ ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವ ಮೊದಲಾದವರು ಮಹಾದೇವಿಯ ಭಕ್ತಿ, ಜ್ಞಾನ, ವೈರಾಗ್ಯ, ಶ್ರೇಷ್ಠ ಸಾಹಿತ್ಯ ಇವುಗಳ ಔನತ್ಯವನ್ನು ಮೆಚ್ಚಿ ಈ ವಿಷಯದಲ್ಲಿ ಆಕೆಯನ್ನು 'ಅಕ್ಕ' ಎಂದು ಕರೆದು ಗೌರವಿಸಿದರು."[5] ಮಹಾದೇವಿ ಮಹಾಮನೆಯನ್ನು ಪ್ರವೇಶಿಸಿದ ನಂತರ ಅಕ್ಕಮಹಾದೇವಿ ಯಾದದ್ದು ಆಕೆಯ ಜ್ಞಾನ ಮತ್ತು ವಿದ್ವತ್ತಿನ ಕಾರಣಕ್ಕಾಗಿ ಹೊರತು ಪುರುಷ ಶರಣರ ಸ್ಥಾನಮಾನಗಳಿಂದಲ್ಲ. 'ಅಕ್ಕಮಹಾದೇವಿ ಶರಣ ಚಳುವಳಿಯಲ್ಲೊಂದು ಭಿನ್ನಸ್ವರ' ಎನ್ನುವ ಲೇಖನದಲ್ಲಿ ಜಿ.ಎಸ್. ಶಿವರುದ್ರಪ್ಪನವರು ವ್ಯಾಖ್ಯಾನಿಸಿರುವ ಈ ಕೆಳಗಿನ ಮಾತುಗಳು ಬಹುಮುಖ್ಯವೆನಿಸುತ್ತವೆ. "ಶರಣ ಸಮುದಾಯಕ್ಕೆ ಬರುವ ವೇಳೆವಾಗಲೇ ಶರಣ ಧರ್ಮದ ತಾತ್ವಿಕ ನಿಲುವುಗಳೂ ಸಾಮಾಜಿಕ ದೃಷ್ಟಿಕೋನಗಳೂ ಒಂದು ರೀತಿಯಲ್ಲಿ ಸಿದ್ಧವಾಗಿದ್ದು, ಇದರ ಚೌಕಟ್ಟಿನೊಳಗಿನ ಎಷ್ಟೋ ಸಂಗತಿಗಳೊಂದಿಗೆ ಆಕೆಯ ಅಭಿಪ್ರಾಯಗಳು ಸಂಗತವಾಗದೆ ಹೋದವೆಂಬುದು ಗುರುತಿಸಿಕೊಳ್ಳಬೇಕಾದ ಅಂಶವಾಗಿದೆ. ಈ ದೃಷ್ಟಿಯಿಂದ ಅಕ್ಕಮಹಾದೇವಿಯು ಈ ವಚನ ಚಳುವಳಿಯಲ್ಲಿ ಇತರರಿಗಿಂತ ಬೇರೆ ಆಗಿ ನಿಲ್ಲುತ್ತಾಳೆ ಮತ್ತು ವೈಯಕ್ತಿಕ ನೆಲೆಯಲ್ಲಿ ಈ ಚಳುವಳಿಗೆ ಆಕೆ ತೋರುವ ಪ್ರತಿಕ್ರಿಯೆಗಳು ಗಮನಾರ್ಹವಾಗಿವೆ."[6] ಜಿ. ಎಸ್. ಶಿವರುದ್ರಪ್ಪನವರ ಈ ಮಾತಿನಲ್ಲಿ ಅಕ್ಕನ ಅನನ್ಯತೆಯ ಅಂಶಗಳಿವೆ. ಪ್ರಮುಖವಾಗಿ ಅಕ್ಕನ ವೈಚಾರಿಕತೆ ಮತ್ತು ತಾತ್ವಿಕ ನಿಲುವುಗಳಿಗೆ ವಚನ ಚಳುವಳಿಯೇ ಕೇಂದ್ರೀತವಾದರೂ ಆಕೆಯ ನಿಲುಗಡೆ ಶ್ರೀಶೈಲವೇ ಹೊರತು ಕಲ್ಯಾಣವಲ್ಲವೆಂಬುದು ಜಿ.ಎಸ್.ಎಸ್. ಅವರ ಅಭಿಪ್ರಾಯವಾಗಿದೆ. ಮುಂದುವರೆದಂತೆ ಗಂಡು ಕೂಡ ಹೆಣ್ಣಿನ ಮಾಯೆ ಎಂಬ ಮಹಿಳಾ ನಿಲುವು, ಗಂಡಿನಂತೆ ಹೆಣ್ಣು ಕೂಡ ತನ್ನ ಸಂಗಾತಿಯನ್ನು ತೊರೆದು ಆಧ್ಯಾತ್ಮವನ್ನು ಸಾಧಿಸಬಲ್ಲಳೆಂಬ ಸ್ತ್ರೀಪರ ಚಿಂತನೆ ಹಾಗೂ ಲೌಕಿಕ ದಾಂಪತ್ಯವನ್ನು ಆಧ್ಯಾತ್ಮ ಸಾಧನೆಯ ನೆಲೆಗಟ್ಟಾಗಿ ಸ್ವೀಕರಿಸಿದ ಶರಣರ ನಡೆಗಳನ್ನು ತೀವ್ರತರವಾಗಿ ವಿರೋಧಿಸಿ ಮರುವ್ಯಾಖ್ಯಾನಗೊಳಿಸಿದ ಹೆಗ್ಗಳಿಕೆ ಅಕ್ಕನದ್ದು ಎಂಬುದನ್ನು ಅನುಭವ ಮಂಟಪದ ಸಂವಾದದಿಂದ ಗುರುತಿಸಿಕೊಳ್ಳಬಹುದಾಗಿದೆ.

ವೈರಾಗ್ಯನಿಧಿಯಾಗಿ ಮಾನಸಿಕ ಕ್ಷಮತೆಯನ್ನು ಸಾಧಿಸಿದಂತಹ ಮಹಾದೇವಿಯು ಶರಣರಿಗೆ ಎದುರುಗೊಳ್ಳುವ ಕ್ರಮದಲ್ಲಿ ಹೆಣ್ಣಿನ ಚರಿತ್ರೆಯನ್ನು ನಿಸ್ಸಂಕೋಚದಿ ದಾಖಲಿಸುವ ಪ್ರತಿನಿಧಿಕರಣವುಂಟು.

[4]. ಸಂಗಮೇಶ ಎಂ ಬಿರಾದರ. *ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ.* ಪುಟ–12

[5]. ಕಮಲಾ ಇಂದೂಧರ ಸಿನ್ನೂರ್. *ಹೊಸಗನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ.* ಪುಟ–63

[6]. ರಹಮತ್ ತರೀಕೆರೆ. (ಸಂ.) (1992). *ಸಾಹಿತ್ಯವಿಮರ್ಶೆ.* ಪುಟ–111

ಶರಣರ ಸಾಲಲ್ಲಿ ನಿಲ್ಲುವ ಅನುಯಾಯಿ ಮಾತ್ರವಾಗಿರದೆ ಅದಕ್ಕೆ ಪ್ರತಿಯಾಗಿ ಮಹಿಳೆಯರ ಪ್ರತಿನಿಧಿಯಾಗಿ ಹೊಸ ಚರಿತ್ರೆಗೆ ನಾಂದಿಹಾಡಲು ಕಲ್ಯಾಣವನ್ನು ಕಾಯಕ ಭೂಮಿಯಾಗಿಸಿಕೊಂಡಿದ್ದಾಳೆ. ಅಕ್ಕಮಹಾದೇವಿಯ ಭಕ್ತಿ ಜ್ಞಾನವು ಅನುಭವ ಮಂಟಪದ ಸಮಾಗಮದಿಂದಾಗಿಯೇ ಸ್ಫೋಟಗೊಂಡಿತೆಂದರೆ ತಪ್ಪಾಗಲಾರದು. 'ಅಯ್ಯಾ ನಿಮ್ಮ ಅನುಭವಿಗಳ ಸಂಗಮದಿಂದ ಎನ್ನ ತನು ಶುದ್ಧವಾಯಿತೆಂದು' ಕೃತಜ್ಞತೆಯಿಂದ ನೆನೆಯುವ ಅಕ್ಕನು ತನಗೆ ಎದುರಾದ ಸತ್ವ ಪರೀಕ್ಷೆಯಿಂದ ಸದೃಢವಾಗುತ್ತಾಳೆಯೇ ಹೊರತು ವಿಚಲಿತಳಾಗುವುದಿಲ್ಲ. ಮಹಾದೇವಿಯಕ್ಕನ ದಿಗಂಬರತ್ವ ಶರಣರನ್ನು ಕಂಗಲಾಗಿಸಿದೆ. ಅನೇಕ ಶಿವಶರಣೆಯರು ವಚನಕಾರರ ಮಹಿಮೆ ಮತ್ತು ಪ್ರಸಿದ್ಧಿಯನ್ನು ಅರಿತು ಅನುಭವ ಮಂಟಪಕ್ಕೆ ಧಾವಿಸಿದರೆ, ಅಕ್ಕನು ಮಾತ್ರ ಚೆನ್ನಮಲ್ಲಿಕಾರ್ಜುನನ ಹುಡುಕಾಟದ ಭಾಗವಾಗಿ ಮಹಾಮನೆಯನ್ನು ಸಾಂಕೇತಿಕವಾಗಿ ಕಾಯಕಭೂಮಿಯನ್ನಾಗಿ ಸ್ವೀಕರಿಸಿದ್ದಾಳೆ. ಅಕ್ಕನ ವಚನಗಳಲ್ಲಿ ವಚನಕಾರರೊಂದಿಗೆ ನಡೆಸಿದ ಸಂವಾದ ಸ್ವರೂಪಿ ಸನ್ನಿವೇಶಗಳು ಸೂಚ್ಯವಾಗಿ ಕಾಣಸಿಗುತ್ತವೆ. ಆದರೆ ಶೂನ್ಯಸಂಪಾದಕರು ಕಟ್ಟಿಕೊಟ್ಟಿರುವ ಕಿನ್ನರಿ ಬೊಮ್ಮಯ್ಯನ ಪರೀಕ್ಷಾ ವಿಧಾನಕ್ಕೆ ಸಂಬಂಧಿಸಿದಂತಹ ನೇರ ನಿರೂಪಣೆ ಅಕ್ಕಳಲ್ಲಿ ದೊರಕುವುದಿಲ್ಲ. ಆದರೆ ಜ್ಞಾನಿ ಕಿನ್ನರಬೊಮ್ಮಯ್ಯನ ಅನುಭಾವದ ಪ್ರಶ್ನೆ ಮತ್ತು ಪ್ರತ್ಯುತ್ತರಗಳ ಸನ್ನಿವೇಶಗಳಿಗೆ ಅಕ್ಕನ ವಚನಗಳಲ್ಲಿ ಸಾಕ್ಷಿಗಳುಂಟು.

*"ಕಲ್ಯಾಣ–ಕೈಲಾಸವೆಂಬ ನುಡಿ ಹಸನಾಯಿತ್ತು !*
*ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ !*
*ಇದರಂತುವನಾರು ಬಲ್ಲರಯ್ಯ ?*
*ನಿಮ್ಮ ಸತ್ಯಶರಣರ ಸುಳುಹು ತೋರುತ್ತಿದೆಯಯ್ಯ !"*[7]

ಉಡುತಡಿಯಿಂದ ಶ್ರೀಶೈಲಕ್ಕೆ ಹೊರಟ ದಾರಿಯಲ್ಲಿ ವಚನಕಾರರ ಕೇಂದ್ರದಿಂದ ಪ್ರಭಾವಿತಳಾದ ಮಹಾದೇವಿಯು ಕಲ್ಯಾಣವನ್ನು ಅನಿವಾರ್ಯತೆಯಿಂದ ಪ್ರವೇಶಿಸಿದ್ದಾಳೆಯೇ ಹೊರತು ಕಲ್ಯಾಣವು ಆಕೆಯ ಆಯ್ಕೆಯಲ್ಲ. ಆದರೆ ಈ ಅನಿವಾರ್ಯತೆಯ ಭೇಟಿಯು ಮಹಾದೇವಿಯಕ್ಕನ ಆಧ್ಯಾತ್ಮಿಕ ವ್ಯಕ್ತಿತ್ವಕ್ಕೆ ಬೆರಗು ಹಾಗೂ ಮೆರುಗು ತಂದಿದೆ. ಅಕ್ಕನ ವೈರಾಗ್ಯದ ಬಗೆಗೆ ಸಮಾಜಕ್ಕೆ ಇದ್ದಂತಹ ತಾತ್ಸಾರಗಳು, ತೊಡಕುಗಳು ನೀಗುವುದಕ್ಕೆ ಕೂಡ ಅನುಭವ ಮಂಟಪವು ಸಾರ್ಥಕ ನೆಲೆಯಾಗಿದೆ. ಅಕ್ಕನ ವೈಚಾರಿಕತೆಯ ಪರಿಣಿತಿಯನ್ನು ಕಂಡು ಬೆರಗುಗೊಂಡಂತಹ ಶರಣ ಸಮೂಹವು ಅಕ್ಕನ ಆಗಮನದಿಂದ ತಮ್ಮ ಕೊರತೆಗಳನ್ನು ನೀಗಿಸಿಕೊಂಡು ಲಿಂಗಾತೀತಗೊಂಡಿದೆ.

ಉಡುತಡಿಯಿಂದ ಕಲ್ಯಾಣದವರೆಗಿನ ನಡಿಗೆಯಲ್ಲಿ ಅಕ್ಕ ಎದುರಿಸಿದ ಉಪಟಳಕ್ಕೂ, ಕಲ್ಯಾಣದಿಂದ ಶ್ರೀಶೈಲದವರೆಗಿನ ಪಯಣದಲ್ಲಿ ಮುಖಾಮುಖಿಯಾದ ಅನುಭವಕ್ಕೂ ವ್ಯತ್ಯಾಸಗಳಿವೆ. ಕಲ್ಯಾಣವನ್ನು ತಲುಪುವವರೆಗೆ ಕೇವಲ ಹೆಣ್ಣಾಗಿದಂತಹ ಅದರಲ್ಲೂ ರಾಜಪ್ರಭುತ್ವವನ್ನು ಧಿಕ್ಕರಿಸಿ ನಡೆದ ವಿರಾಗಿಣಿಯಾದಂತಹ ಅಕ್ಕ ಅನುಭವ ಮಂಟಪದ ಅನುಭಾವದ ನಂತರ ಶರಣೆಯಾಗಿ ಒಪ್ಪಿತವಾಗುತ್ತಾಳೆ. ಹಾಗಂತ ವಚನಕಾರರ ಮುದ್ರೆಯಿಂದ ಅಕ್ಕಳಿಗೆ ಶರಣತ್ವ ದಕ್ಕಿತು ಎಂಬುದು ಇದರರ್ಥವಲ್ಲ. ಪ್ರಭುತ್ವವನ್ನು ಕಾಲು ಕಸವಾಗಿ ಕಂಡ ಅಕ್ಕಳಿಗೆ ವಚನಕಾರರ ಆಧ್ಯಾತ್ಮ ಮತ್ತು ಸಾಮಾಜಿಕ ನಿಷ್ಠೆಯ ಸಾನಿಧ್ಯ ಬೇಕಿತ್ತೆ ವಿನಹ ಶರಣರ ಮನ್ನಣೆ ದೊರಕಬೇಕೆನ್ನುವ ಅಧೀನತೆಯ ಬಯಕೆಗಳಿರಲಿಲ್ಲ. ಮಹಾದೇವಿಯಕ್ಕನ ಮನ ಚೆನ್ನಮಲ್ಲಿಕಾರ್ಜುನನಿಗಲ್ಲದೆ ಅನ್ಯಕ್ಕೆ ಎಳಸುವುದಿಲ್ಲ. ಆದರೆ ಶರಣರಿಗೆ 'ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲತಾರೆನು' ಎನ್ನುವ ಕೃತಜ್ಞತೆಯ ಭಕ್ತಿಯೂ ಕೂಡ ಅಕ್ಕಳಲ್ಲಿ ಮೇಳೈಸಿದೆ.

[7]. ಬಸವರಾಜು. ಎಲ್. (ಸಂ.) *ಅಕ್ಕನ ವಚನಗಳು*. ಪುಟ–118, 119

ಅನುಭವ ಮಂಟಪದ ಜ್ಞಾನ ಮತ್ತು ವೈರಾಗ್ಯದ ಮೂರ್ತಿಗಳಾದ ಅನೇಕ ಶರಣರನ್ನು ಕುರಿತು ಅಕ್ಕ ಸ್ಮರಿಸಿದ್ದಾಳೆ. ತನ್ನ ಕುಟುಂಬದಲ್ಲಿ ಚೆನ್ನಮಲ್ಲಿಕಾರ್ಜುನನೆಂಬ ಅಲೌಕಿಕ ಪತಿಯನ್ನು ಮಾತ್ರ ಇರಿಸಿಕೊಂಡಂತಹ ಅಕ್ಕನಿಗೆ ಶರಣರೆಂಬ ಸಹೋದರರು ಎದುರುಗೊಂಡು ಆಕೆಯ ಆಧ್ಯಾತ್ಮದ ಪರಿವಾರ ದೊಡ್ಡದಾಗಲು ಅನುಭವ ಮಂಟಪವೇ ಸಾಕ್ಷಿಯಾಗಿದೆ. ಜ್ಞಾನ ಹಾಗೂ ವೈಚಾರಿಕತೆಯ ದೃಷ್ಟಿಯಿಂದ ಮಹಾಮನೆಗೆ ಅಕ್ಕನೆನಿಸಿಕೊಂಡ ಮಹಾದೇವಿಯು ಅನುಭಾವ ಮತ್ತು ಜ್ಞಾನದಾಸೋಹದ ದೃಷ್ಟಿಯಿಂದ ಅಲ್ಲಮ, ಬಸವಣ್ಣನಂತಹ ಜ್ಞಾನ ಭಂಡಾರಿಗಳಿಗೆ ಸಹೋದರಿಯಾಗಿ ಕೃತಾರ್ಥಳಾಗಿದ್ದಾಳೆ. ಅನುಭವ ಮಂಟಪವೆನ್ನುವುದು ಮಹಾದೇವಿಯಕ್ಕನನ್ನು ಲೋಕಕ್ಕೆ ಪರಿಚಯಿಸಿದ ಬಹುಮುಖ್ಯ ವೇದಿಕೆ ಎಂಬುದು ಚರಿತ್ರಾರ್ಹಸಂಗತಿಯಾಗಿದೆ.

**ಆಕರ ಗ್ರಂಥಗಳು**


- ಬಸವರಾಜು, ಎಲ್. (ಸಂ.) (2012). *ಅಕ್ಕನ ವಚನಗಳು.* ಗೀತಾ ಬುಕ್ ಹೌಸ್.
- ಕಮಲಾ ಇಂದೂಧರ ಸಿನ್ನೂರ್. *ಹೊಸಗನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ.* ಪ್ರಯದರ್ಶಿನಿ ಪ್ರಕಾಶನ,
- ರಹಮತ್ ತರೀಕೆರೆ. (ಸಂ.) (1992). *ಸಾಹಿತ್ಯವಿಮರ್ಶೆ.*
- ಸಂಗಮೇಶ ಎಂ. ಬಿರಾದರ. (1984). *ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ.* ಕರ್ನಾಟಕ ವಿಶ್ವವಿದ್ಯಾಲಯ.